# ವಾರ್ತಾ ವಿಶ್ಲೇಷಣೆ

## ಧೂಮದಿಂದ ಹೊರಬಂದ ಹೋಮ

**ವೇದಕಾಲದ** ಹೋಮಕ್ಕೆ ಮತ್ತೆ ಸುಗ್ಗೀ ಕಾಲ ಪ್ರಾಪ್ತವಾಗುತ್ತಿದೆ. ಯಾಗ-ಯಜ್ಞಗಳನ್ನು ವೇದಕಾಲದ ಪಳೆಯುಳಿಕೆಗಳು ಎಂದು ತಿರಸ್ಕಾರದಿಂದ ನೋಡಲಾಗುತ್ತಿತ್ತು. ಇವೆಲ್ಲ ಮೂಢನಂಬಿಕೆ ಎಂಬ ಆಪಾದನೆಯ ಹೊಗೆಯೊಳಗೆ ಅವು ಅವಿತುಕೊಂಡಿದ್ದವು. ಎಲ್ಲೋ ಅಪರೂಪಕ್ಕೆ ಒಮ್ಮೊಮ್ಮೆ ಯಾಗ-ಯಜ್ಞಾದಿಗಳು ನಡೆಯುತ್ತಿದ್ದವು. ವಿಶೇಷ ಪೂಜೆಗಳಲ್ಲಿ ಮತ್ತು ಮದುವೆ ಮುಂತಾದ ಸಂದರ್ಭಗಳಲ್ಲಿ ಹೋಮ ನಡೆಯುತ್ತಿತ್ತು.

ಆದರೆ ಇತ್ತೀಚೆಗೆ ಇವುಗಳ ಮಹತ್ವ ಹೆಚ್ಚಾಗುತ್ತಿದೆ. ವಿದೇಶಗಳಲ್ಲೂ ಹೋಮಗಳು ನಡೆಯುತ್ತವೆ ಎಂದರೆ ಅನೇಕ ಹಿಂದೂಗಳಿಗೆ ತುಂಬ ಸಂತೋಷವಾಗಬಹುದು, ಹಾಗೆಯೇ ವಿಚಾರವಾದಿಗಳಿಗೆ ತುಂಬ ಕಸಿವಿಸಿಯೂ ಆಗಬಹುದು. ಆದರೆ ವಿಚಾರವಾದಿಗಳಿಗೆ ಸಮಾಧಾನ ನೀಡಲು ಅವುಗಳಿಗೆ ವೈಜ್ಞಾನಿಕ ವಿವರಣೆ ನೀಡಲಾಗುತ್ತಿದೆ. ಹೋಮದ ಧೂಮ ಪರಿಸರ ಮಾಲಿನ್ಯವನ್ನು ಹೋಗಲಾಡಿಸುವುದು ಎಂದು ಹೇಳುತ್ತಾರೆ. ಜನಸಾಮಾನ್ಯರಿಗೆ ವೈಜ್ಞಾನಿಕ ವಿವರಣೆ ಮುಖ್ಯವಲ್ಲ. ಅವರಿಗೆ ಬೇಕಾಗಿರುವುದು ಒಂದು ಶ್ರದ್ಧೆಯ ಆಶ್ರಯ. ಅದು ಮೂಢವೊ ಸತ್ಯವೊ ಎಂಬುದು ಮುಖ್ಯವಲ್ಲ.

ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಸೇರಿ ಹೋಮವನ್ನು ಆಚರಿಸುತ್ತಾರೆ ಎಂದರೆ ತುಂಬ ಆಚ್ಚರಿಯೇ. ಆದರೆ ಇನ್ನೂ ಆಶ್ಚರ್ಯವೆಂದರೆ ಅದು ನಡೆದದ್ದು ವಿದೇಶದಲ್ಲಿ— ಅಮೆರಿಕದ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ. ಏಪ್ರಿಲ್ ೧೩ರಂದು ಸಂಜೆ ಈ ಹೋಮ ನಡೆಯಿತು. ೫೦ ಭಾರತೀಯ ಮತ್ತು ಅಮೆರಿಕನ್ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಅದರಲ್ಲಿ ಭಾಗವಹಿಸಿದ್ದರು.

ಜನಸಾಮಾನ್ಯರಿಗೆ ಅಮೂರ್ತ ತಾತ್ತ್ವಿಕ ವಿಚಾರಗಳು ಅಷ್ಟೊಂದು ತೃಪ್ತಿಯನ್ನು ನೀಡುವುದಿಲ್ಲ. ಅವರ ಭಾವನೆಗೆ ಆಹಾರವನ್ನು ನೀಡುವ, ಅನುಷ್ಠಾನಯೋಗ್ಯವಾದ ಮೂರ್ತರೂಪದ ಕ್ರಿಯಾವಿಧಿಗಳು ಬೇಕು. ಆದ್ದರಿಂದಲೆ ಸ್ವಾಮಿ ವಿವೇಕಾನಂದರು, ತತ್ತ್ವ, ಪುರಾಣ ಮತ್ತು ಕ್ರಿಯಾವಿಧಿ (*philosophy, mythology and rituals*) ಇವು ಧರ್ಮದ ಮೂರು ಮುಖ್ಯ ಅಂಗಗಳು ಎಂದು ಹೇಳಿದ್ದಾರೆ. ತತ್ತ್ವವನ್ನು ಜನಸಾಮಾನ್ಯರಿಗೆ ಅರ್ಥವಾಗಲೆಂದು ಕಥೆಗಳ ರೂಪದಲ್ಲಿ ಹೇಳಿದಾಗ ಪುರಾಣವಾಗುತ್ತದೆ. ಅದನ್ನು ಇನ್ನೂ ಸ್ಥೂಲಗೊಳಿಸಿದಾಗ ಕ್ರಿಯಾವಿಧಿಯಾಗುತ್ತದೆ. ◆

## ಒಂದೇ ಧರ್ಮ ಒಂದೇ ಮಾರ್ಗ

**ಇತ್ತೀಚೆಗೆ** ರೋಮನ್ ಕ್ಯಾಥೋಲಿಕ್ ಧರ್ಮದ ಪ್ರಧಾನ ಕೇಂದ್ರವಾದ ವ್ಯಾಟಿಕನ್ ೩೭ ಪುಟಗಳ *Dominus Iesus* ಎಂಬ ಘೋಷಣೆಯನ್ನು ಹೊರಡಿಸಿದೆ. ಇದು ಕ್ರೈಸ್ತೇತರ ಧರ್ಮದವರನ್ನು ಮಾತ್ರವಲ್ಲದೆ ಕ್ಯಾಥೋಲಿಕ್‌ರಲ್ಲದ ಇತರ ಕ್ರೈಸ್ತಧರ್ಮಾನುಯಾಯಿಗಳನ್ನೂ ಕೋಪಗೊಳಿಸಿದೆ. ಆ ಘೋಷಣೆಯ ಪ್ರಕಾರ ಕ್ಯಾಥೊಲಿಕರು ಮಾತ್ರ ಸ್ವರ್ಗಕ್ಕೆ ಹೋಗಲು ಅರ್ಹರು. ಕ್ರಿಸ್ತನೇ ಏಕೈಕ ಅವತಾರ, ಅವನ ಮಾರ್ಗವೊಂದೇ ಏಕೈಕ ಮಾರ್ಗ. ಕ್ರಿಸ್ತನಲ್ಲಿ ಮಾತ್ರ ಭಗವಂತನ ಪೂರ್ಣ ಅಭಿವ್ಯಕ್ತಿ, ಉಳಿದ ಧರ್ಮಗಳಲ್ಲಿ ಭಗವತ್ಸಾಕ್ಷಾತ್ಕಾರದ ಒಂದು ಕಿರಣಮಾತ್ರ ಕಂಡುಬರುತ್ತದೆ. ಆದ್ದರಿಂದ ಎಲ್ಲ ಧರ್ಮಗಳೂ ಸಮಾನ ಎಂದು ಒಪ್ಪಿಕೊಳ್ಳುವುದು ದೈವನಿಂದೆ. ಇತ್ತೀಚೆಗೆ ಕ್ರೈಸ್ತರನೇಕರು ಧರ್ಮಸಮನ್ವಯವನ್ನು ಒಪ್ಪಿಕೊಳ್ಳುತ್ತಿರುವುದನ್ನು ಘೋಷಣೆ ಖಂಡಿಸುತ್ತದೆ. ಇದು ಕ್ರಿಸ್ತನ ಹೇಳಿಕೆಗೇ ವಿರುದ್ಧವೆಂದು, ಈ ಕೆಳಗಿನ ಕ್ರಿಸ್ತನ ಹೇಳಿಕೆಯನ್ನು ಅದು ಸಮರ್ಥಿಸುತ್ತದೆ : 'ಪ್ರಪಂಚದೆಲ್ಲೆಡೆ ಹೋಗಿ ಪ್ರತಿ ಜೀವಿಗೂ ಸುವಾರ್ತೆ(*Gospel*)ಯನ್ನು ಸಾರಿ. ಯಾವನು ನಂಬುತ್ತಾನೊ ಮತ್ತು ಯಾವನಿಗೆ ಬ್ಯಾಪ್ಟೈಸ್ ಆಗಿರುತ್ತದೊ ಅವನು ಮಾತ್ರ ರಕ್ಷಿಸಲ್ಪಡುತ್ತಾನೆ. ನಂಬದವನಿಗೆ ನರಕವೇ ಗತಿ' (*Mark, 16:15-16*).

ಹೀಗೆಯೇ ಮುಸ್ಲಿಮರೂ ತಮ್ಮ ಧರ್ಮದಿಂದ ಮಾತ್ರ ಉದ್ಧಾರ, ಉಳಿದವರು ತಮ್ಮ ಧರ್ಮವನ್ನು ಸ್ವೀಕರಿಸಬೇಕು, ಇಲ್ಲವೇ ಸಾಯಬೇಕು ಎಂದು ಹೇಳುತ್ತಾರೆ. ಹೀಗೆ ಹೇಳುವ ಧರ್ಮದವರೆಲ್ಲ ಪರಸ್ಪರ ಕಚ್ಚಾಡಿಕೊಂಡು ಸ್ವರ್ಗಕ್ಕೆ ಹೋದರೆ ಉಳಿದವರು ಈ ಭೂಮಿಯ ಮೇಲೆ ಶಾಂತಿಯಿಂದಿರಬಹುದು. ಆಗ ಇದೇ ಸ್ವರ್ಗವಾಗಹುದು.

ತಮ್ಮ ಧರ್ಮವೊಂದೇ ಸತ್ಯ ಎನ್ನುವವರು ಅನ್ಯಮತ ದ್ವೇಷವೆಂಬ ನರಕಜ್ವಾಲೆಯಿಂದ ಆಗಲೇ ನರಳುತ್ತಿರುವರು. ಆದ್ದರಿಂದ ಅವರು ಸತ್ತಮೇಲಾದರೂ ಸ್ವರ್ಗಕ್ಕೆ ಹೋಗುವುದು ಒಳ್ಳೆಯದು. ಆದರೆ ನಮ್ಮ ಭಗವದ್ಗೀತೆ ಹೇಳುತ್ತದೆ: [illegible] ಲೋಕಂ ವಿಶಂತಿ—'ಪುಣ್ಯ ತೀರಿದ ಮೇಲೆ ಅವರು ಮತ್ತೆ ಭೂಮಿಗೆ ಹಿಂದಿರುಗುತ್ತಾರೆ' ಎಂದು! ಅಂತೂ ನಮಗೆ ಅವರಿಂದ ಬಿಡುಗಡೆಯಿಲ್ಲ!

ಮತಾಂಧತೆ ಎನ್ನುವುದು ಒಂದು ಮಾನಸಿಕ ರೋಗ, ಯಥಾರ್ಥ ಧಾರ್ಮಿಕ ಶ್ರದ್ಧೆಯ ಕೊರತೆಯಿಂದ ಅದು ಉಂಟಾಗುತ್ತದೆ ಎಂದು ಮನಶ್ಶಾಸ್ತ್ರಜ್ಞರು ಹೇಳುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಕಲಹ ಪ್ರವೃತ್ತಿ ಮಾನವ ಸ್ವಭಾವದಲ್ಲಿಯೇ ಇದೆ. ಅದು ಯಾವುದಾದರೂ ನೆಪದಿಂದ ಹೊರಗೆ ವ್ಯಕ್ತವಾಗುತ್ತದೆ. ದೇಶ, ಜನಾಂಗ, ಭಾಷೆ ಮುಂತಾದ ಹೆಸರಿನಲ್ಲಿ ಜಗಳವಾಡುವಂತೆ ಧರ್ಮದ ಹೆಸರಿನಲ್ಲಿಯೂ ಆಡುತ್ತಾರೆ. ತಮ್ಮ ಕಲಹಪ್ರವೃತ್ತಿಗೆ ಒಂದು ಆದರ್ಶದ ಮುಸುಕನ್ನು ಹಾಕುತ್ತಾರೆ.ಈ ಕಲಹ ಪ್ರವೃತ್ತಿಯಿಂದ ದುಃಖಕ್ಕೀಡಾಗುವವರು ಮುಗ್ಧ ಜನರು. 'ಭಾವನೆಗಳ ಯುದ್ಧದಲ್ಲಿ ಸಾಯುವವರು ಜನ' (In a war of ideas, it is people who get killed). ◆